# <u>ಅಕ್ಕಮಹಾದೇವಿಯವರ "ಆ"ಅಕ್ಷರದ ವಚನದ ಅರ್ಥ</u>

1. ಆಲಿಸೆನ್ನ ಬಿನ್ನಪವ ಪಾಲಿಸೆನ್ನ ಬಿನ್ನಪವ

ಏಕೆನ್ನ ಮೊರೆಯ ಕೇಳೆ. ನೀನಲ್ಲದೆ ಮತ್ತಿಲ್ಲ

ನೀನೆ ಎನಗೆ ಗತಿ .ನೀನೆ ಎನಗೆ ಮತಿ ಚೆನ್ನಮಲ್ಲಿಕಾರ್ಜುನಯ್ಯ.

ಪದಗಳ ಅರ್ಥ

ಆಲಿಸು -ಕೇಳು, ಲಾಲಿಸು ಮನ್ನಿಸು,

ಮೊರೆ-ಅರ್ತನಾದ, ಆಪತ್ತಿನ ಕೂಗು.

ಗತಿ-ದಿಕ್ಕು, ಮತಿ

ವಿವೇಕ-ಬುದ್ಧಿ

ಬಿನ್ನಪ- ಮೊರೆ, ಪ್ರಾರ್ಥನೆ .

ವಚನದ ಅರ್ಥ

ಆಲಿಸೆನ್ನ ಬಿನ್ನಪವ ಪಾಲಿಸೆನ್ನ ಬಿನ್ನಪವ ನನ್ನ ಪ್ರಾರ್ಥನೆಯನ್ನು ಕೇಳು ನನ್ನ ಮೊರೆಯನ್ನು ನಡೆಸಿಕೊಡು. ಏಕೆನ್ನ ಮೊರೆಯ ಕೇಳೆ.ನೀನಲ್ಲದೆ ಮತ್ತಿಲ್ಲ. ನೀನು ನನ್ನ ಪ್ರಾರ್ಥನೆಯನ್ನು ಏಕೆ ಕೇಳುತ್ತಿಲ್ಲ. ನಿನ್ನನ್ನು ಬಿಟ್ಟು ನನಗೆ ಯಾರೂ ಇಲ್ಲ. ನೀನೆ

ನನಗೆ ಗತಿ ನೀನೆ ಎನಗೆ ಮತಿ ನನಗೆ ನೀನೆ ದಿಕ್ಕು, ನನಗೆ ನೀನೆ ಬುದ್ಧಿ ಹಾಡಿ ಸೋತು, ಮೌನವಾಗಿ ಮರೆದೊರಗಿದ ಅಕ್ಕನವರು ಮತ್ತೆ ಎಚ್ಚತ್ತಾಗಲೂ ಪರಮಾತ್ಮನಲ್ಲಿ ಪರಿಪರಿಯಾಗಿ ವಿನಂತಿಸಿದ್ದಾರೆ. ಭಕ್ತಿಯಲ್ಲಿ 9 ಪ್ರಕಾರವನ್ನು ಹೇಳುತ್ತಾರೆ. ಶರಣರು 6ಪ್ರಕಾರದ ಭಕ್ತಿಯನ್ನು ಹೇಳುತ್ತಾರೆ. ಅಕ್ಕಮಹಾದೇವಿಯವರು ಎಂಟು ವಿಧದ ಅರ್ಚನೆಯನ್ನು ನಡೆಸಿದ್ದಾರೆ.ದೇವರನ್ನು ಒಲಿಸಿಕೊಳ್ಳಲು ಯಾವ ಯಾವ ವಿಧದ ಶ್ರೇಷ್ಠ ಭಕ್ತಿಯನ್ನು ಮಾಡಬೇಕೊ ಆ ಎಲ್ಲ ವಿಧದ ಭಕ್ತಿಯನ್ನು ಅಕ್ಕಮಹಾ ಬೇವಿಯವರು ನಡೆಸಿದ್ದಾರೆ.

2) ಆಯುಷ್ಯ ಹೋಗುತ್ತಿದೆ. ಭವಿಷ್ಯ ತೊಲಗುತ್ತಿದೆ.

ಕೂಡಿರ್ದ ಸತಿಸುತರು ತಮತಮಗೆ ಹರಿದು ಹೋಗುತ್ತಿದ್ದಾರೆ.

ಬೇಡ ಬೇಡವೆಲೆ ಮನವೆ, ಬಯಲಿಂಗೆ ಕೆಡಬೇಡ.

ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಅನುಭಾವದಲಿ ಬದುಕು ಮನವೆ.

ಪದಗಳ ಅರ್ಥ

ಆಯುಷ್ಯ-ಜೀವಿತಾವಧಿ,

ಭವಿಷ್ಯ-ಮುಂದಿನ ಜೀವನ,

ಬಯಲು-ಶೂನ್ಯ,

ವಚನದ ಅರ್ಥ

ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ. ಕೂಡಿರ್ದ ಸತಿ ಸುತರು ತಮ ತಮಗೆ ಹರಿದು ಹೋಗುತ್ತಿದ್ದಾರೆ. ಆಯುಷ್ಯ ಕಳೆದು ಹೋಗುತ್ತಿದೆ. ಮುಂದಿನ ಜೀವನ ತೇಲಿಹೋಗುತ್ತಿದೆ. ಜೊತೆಯಿದ್ದ ಪತ್ನಿ, ಪುತ್ರರು ಕೈಬಿಡುತ್ತಿದ್ದಾರೆ. ಬೇಡಬೇಡವೆಲೆ ಮನವೆ ಬಯಲಿಂಗೆ ಕೆಡಬೇಡ. ಎಲೆ ಮನಸ್ಸೆ ಈ ಬಯಲನ್ನು ನಂಬಿ ಇರುವ ಜೀವನ ಕಳೆದು ಕೊಳ್ಳಬೇಡ. ಶರಣರ ಸಂಗದಲ್ಲಿ ಅನುಭಾವದಲಿ ಬದುಕುಮನವೆ. ಶರಣರ ಸನ್ನಿಧಿಯಲ್ಲಿದ್ದು ಅನುಭಾವ ಜೀವನ ನಡೆಸು. ಅನುಭಾವ ಎಂದರೆ ಪರಮಾರ್ಥ ಚಿಂತನೆ, ಗೋಷ್ಟಿಯಲ್ಲಿ ದಿನಗಳನ್ನು ಕಳೆ . ಪರಮಾತ್ಮನೇ ಬೇಕೆಂದು ಬಂದುದು ಬಯಲ ಭಾವನೆಯಾಗಿ ಹೋಯಿತು. ಇಲ್ಲದ ಸುಖಕ್ಕೆ ಆಶೆ ಮಾಡಿ ಇರುವ ಜೀವ ನವನ್ನೂ ಕಳೆದುಕೊಳ್ಳಬೇಡ. ನಿನ್ನ ಹಾಗೆ ಅನೇಕ ಶರಣರು ಅನುಭಾವ ಜೀವನಕ್ಕೆ ಬಂದರು. ಅವರು ಜೀವನ ಅರ್ಥಮಾಡಿಕೊಂಡು ಬದುಕುತ್ತಿದ್ದಾರೆ. ನೀನೂ ಅವರ ಒಡನಾಟದಲ್ಲಿದ್ದು ಅನುಭಾವಜೀವನ ನಡೆಸು. ಆತ್ಮನಿಗೆ ಹೇಳಿಕೊಂಡಿದ್ದಾರೆ.

ಆಯುಷ್ಯಹೋಗುತ್ತಿದೆ ಭವಿಷ್ಯ ತೊಲಗುತ್ತಿದೆ. ಇನ್ನು ನನಗೆ ಭವಿಷ್ಯವೂಹೋಯಿತು ಜೀವನವೂ ಹೋಯಿತು. ಬಹುಶಃ ಎಲ್ಲರ ಜೀವನವು ಹೀಗೆ ಒಂದಲ್ಲ ಒಂದು ಕಾರಣಕ್ಕೆ ವ್ಯರ್ಥವಾಗಿ ಕಳೆದು ಹೋಗಿರಬಹುದು.ಕೂಡಿರ್ದ ಸತಿಸುತರು ತಮತಮಗೆ ಹರಿದು ಹೋಗತ್ತೈದಾರೆ. ಕಾಲ ಗತಿಯಲ್ಲಿ ಪತ್ನಿ, ಪುತ್ರಎಲ್ಲರೂ ದೂರವಾಗುತಿ ದ್ದಾರೆ. ಎಷ್ಟು ಬೇಗ ವರ್ಷಗಳು ಕಳೆದೇ ಹೋದವು. ವರ್ಷಗಳು ನಿಮಿಷದಂತೆ ಉದುರಿ ಹೋದವು .ಹೆಂಡತಿ ಮಕ್ಕಳೂ ಕೈ ಬಿಟ್ಟರು. ಯಾವುದೂ ಸ್ಥಿರವಲ್ಲ. ನಿತ್ಯ ವಾದುದನ್ನು ಹಿಡಿ. ಶರಣರ ಅನುಭಾವದಲ್ಲಿ ಬದುಕು. ಚೆನ್ನಮಲ್ಲಿಕಾರ್ಜುನನೆ ಗಂಡನೆಂದು ಬಂದೆ .ಅದು ಬರಿ ಬಯಲು, ಬಯಲನ್ನು ಗಂಡ ಎಂದು ತಿಳಿದೆ ಯಲ್ಲ ? ಈ ಪ್ರಮಾದಕ್ಕೆ ಈಹಿರಿಯರೆ ಕಾರಣ. ಅವರಿಗೆ ಅರಿವಿದ್ದರೆ ಈ ದುಃಖ ಬರುತ್ತಿರಲಿಲ್ಲ. ಇರಲಿನಷ್ಟವೇನೂ ಇಲ್ಲ. ದಿವ್ಯ ಜೀವನದಲ್ಲಿರುವೆ ಅರಿವಿನ ಜೀವನದಲ್ಲಿ ಇತರರನ್ನೂ ನಡೆಸು. ಬದುಕು ಇರುವುದೆ ಜೀವನ ಪ್ರೀತಿಯಲ್ಲಿ ಪ್ರತಿಭಾ ಸೃಷ್ಟಿಯಿಂದ ಲೋಕವನ್ನು ಆನಂದಗೊಳಿಸು. ಆನಂದದ ಅನುಭಾವ ಗೋಷ್ಟಿ ನಿನ್ನಿಂದ ನಡೆಯಲಿ.  . ಶ್ರೀ ಶೈಲದಲ್ಲಿ

ಶರಣರು ಸಿಧ್ಧಿಪುರುಷರ ಯೋಗಿಗಳ ದರ್ಶನವಾದಗ

ಅಕ್ಕಮಹಾದೇವಿಯರು  ಆತ್ಮಾವಲೋಕನ

ಮಾಡಿಕೊಂಡರು.

3) ಆತುರದ ಧ್ಯಾನದಿಂದ ಧಾವತಿಗೊಂಡೆ, ಜ್ಯೋತಿರ್ಲಿಂಗವ ಕಾಣಿಸಬಾರದು.

ಮಾತಿನ ಮಾಲೆಗೆ ಸಿಲುಕುವವನಲ್ಲ.

ಧಾತುಗೆಡಿಸಿ ಮನವ ನೋಡಿ ಕಾಡುವನು.

ಆತ್ಮನಂತರಪರವನರಿದಡೆ ಆತನೆ ಶಿವಯೋಗಿ.

ಆತನ ಪಾದಕ್ಕೆ ಶರಣೆಂಬೆನಯ್ಯ ಚೆನ್ನಮಲ್ಲಿಕಾರ್ಜುನ.

ಪದಗಳ ಅರ್ಥ

ಆತುರ-ಅವಸರ,ತುರ್ತು.

ಧಾವತಿ-ಬೇಗೆ,ಪ್ರಾಣ, ಮನಸ್ಸಿನ ನೋವು

ಕಾಣಿಸಬಾರದು-ತೋರಲು ಬರುವುದಿಲ್ಲ. ಜ್ಯೋತಿರ್ಲಿಂಗ-ಬೆಳಕಿನ ಬಯಲು.

ಮಾತಿನಮಾಲೆ-ಶಬ್ದಜಾಲ, ಶಬ್ದದ ಹೂಮಾಲೆ. ಧಾತುಗೆಡಿಸಿ-ಧೈರ್ಯಗೆಡಿಸಿ, ಶಕ್ತಿ ಉಡುಗಿಸಿ.

ಆತ್ಮನಂತರಪರ-ಆತ್ಮಮೀರಿದಪರಮಾತ್ಮ ಆತ್ಮದೂರವಾದ ದೇವರು. ಪರ-ಅಲೌಕಿಕ,ಪರವಸ್ತುವಿಚಾರ.

ಅಂತರ-ದೂರ.

ವಚನದ ಅರ್ಥ

ಆತುರದ ಧ್ಯಾನದಿಂದ ದಾವತಿಗೊಂಡೆ. ಜ್ಯೋತಿರ್ಲಿಂಗವ ಕಾಣಿಸಬಾರದು.

ಪರಮಾತ್ಮನನ್ನು ಕಾಣಬೇಕು ಎಂದು ಅವಸರಮಾಡಿದೆ. ಪರಮಾತ್ಮನನ್ನು ಅವಸರ ದಲ್ಲಿ ಕಾಣಲುಬರಲುವುದಿಲ್ಲ. ಅವಸರ ಮಾಡಿ ನಾನು ಸುಮ್ಮನೆ ನೋವು ಅನುಭವಿಸಿದೆ. ಮಾತಿನ ಮಾಲೆಗೆ ಸಿಲುಕುವವನಲ್ಲ. ಪರಮಾತ್ಮನು ಮಾತಿನಲ್ಲಿ ಕಟ್ಟುವ ಹೂಮಾಲೆಗೆ ಸಿಗುವುದಿಲ್ಲ. ಧಾತುಗೆಡಿಸಿ ಮನವ ನೋಡಿಕಾಡುವನು. ಅವನು ಧೈರ್ಯ್ಯ ಗೆಡಿಸಿ ನೋಡುತ್ತಾನೆ. ಮನಸ್ಸನ್ನು ಆಶೆ ಆಮಿಷಗಳ ಕಡೆಗೆ ಸೆಳೆಯಲು ನೋಡುತ್ತಾನೆ. ಆತ್ಮನಂತರ ಪರವನರಿದಡೆ ಆತನೆ ಶಿವಯೋಗಿ, ಶಿವಯೋಗಿಯಾರು? ಪರ ವಸ್ತು ಪರಮಾತ್ಮನನ್ನು ಅರಿತವನು ಶಿವಯೋಗಿ. ಆತ್ಮನ ಮಿತಿಗಳನ್ನು ತಿಳಿದವನು ಶಿವಯೋಗಿ. ಆತನ ಪಾದಕ್ಕೆ ಶರಣೆಂಬೆನಯ್ಯ ಚೆನ್ನಮಲ್ಲಿಕಾರ್ಜುನಾ. ಅಂತಹ

ಶರಣರ ಪಾದಗಳಿಗೆ ನನ್ನ ಶರಣಾರ್ಥಿಗಳು. ಈ ವಚನದಲ್ಲಿ ಮೊದಲ ನಾಲ್ಕು ಸಾಲು ಗಳಲ್ಲಿಅತ್ಮಾವಲೋಕನವಿದೆ. ಕೊನೆಯ ಎರಡು ಸಾಲುಗಳಲ್ಲಿ ಶಿವಯೋಗಿ

ಯಾರು? ಪ್ರಶ್ನೆ, ಉತ್ತರವಿದೆ. ಅನುಭಾವದ ದಾರಿಯಬೆಳಕನ್ನು ತಿಳಿಸಿಕೊಟ್ಟರೆ, ಅವರಿಗೆ ಶರಣಾರ್ಥಿ ಎನ್ನುತ್ತಾರೆ. ಅಕ್ಕಮಹಾದೇವಿಯವರಿಗೆ ತುರ್ತಾಗಿ ಪರಮಾತ್ಮ ಬೇಕು, ತಪಸ್ಸಿನ ಅವಲೋಕನ ಈ ವಚನ.ಧ್ಯಾನವನ್ನು ಅವಸರದಲ್ಲಿ ಮಾಡಲಾಗು ವುದಿಲ್ಲ. ಬೇಗ ಬೇಗ ಎನ್ನುವುದು ಧ್ಯಾನ ವಿಚಾರದಲ್ಲಿ ನಡೆಯುವುದಿಲ್ಲ.ಪರ ಮಾತ್ಮನು ಧೈರ್ಯ್ಯಗೆಡಿಸಿ, ಚಿತ್ತ ಕಲಕಿ, ಸಮಾಧಾನ ಹೋಗಿಸಿ, ವಿಪತ್ತು ಒಡ್ಡಿ ಕಾಡುತ್ತಾನೆ . ಏನೆಲ್ಲ ಪರಿಯಲ್ಲಿ ಕಾಡುವನೆಂಬ ತಿಳಿವು ಕೊಡುವ ಶಿವಯೋಗಿಗಳಿಗೆ ಶರಣು ಶರಣಾರ್ಥಿಗಳು.

4)ಆಡುವುದು ಪಾಡುವುದು ಹೇಳುವುದು ಕೇಳುವುದು

ನಡೆವುದು, ನುಡಿವುದು,

ಸರಸ, ಸಮೇಳನವಾಗಿಪ್ಪುದು ಶರಣರೊಡನೆ

ನೀಕೊಟ್ಟ ಆಯುಷ್ಯವುಳ್ಳನ್ನಕ್ಕರ

ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವುದು

ಚೆನ್ನ ಮಲ್ಲಿಕಾರ್ಜುನ.

ಆಡುವುದುಪಾಡುವುದು ಹೇಳುವುದುಕೇಳುವುದು ನಗೆನುಡಿಸರಸ

ಸಮೇಳನವಾಗಿಪ್ಪುದು ಶರಣರೊಡನೆ. ಭಕ್ತಿಯ ಆಟ ಆಡಬೇಕು. ಪರಮಾತ್ಮನನ್ನು 'ಕುರಿತು ಹಾಡಬೇಕು. ಪರಮಾತ್ಮನ ವಿಚಾರವನ್ನು ಹೇಳಬೇಕು. ಪರಮಾತ್ಮನ ಭಕ್ತಿ ವಿಚಾರವನ್ನು ಕೇಳಬೇಕು. ಶರಣರ ಜೊತೆ ನಕ್ಕು ನಲಿಯಬೇಕು. ಶರಣರ ಜೊತೆ ಹೊಂದಿ ಬಾಳಬೇಕು.ನೀ ಕೊಟ್ಟ ಆಯುಷ್ಯವುಳನ್ನಕ್ಕರ ಲಿಂಗಸುಖಗಳ ಸಂಗದಲ್ಲಿ ದಿನಂಗಳ ಕಳೆವುದು. ಪರಮಾತ್ಮ ನಮಗೆ ಆಯುಷ್ಯ ಕೊಟ್ಟಿದ್ದಾನೆ. ಪರಮಾನಂದ ದಲ್ಲಿರುವರ ಸಂಗದಲ್ಲಿದ್ದು ನಮ್ಮ ದಿನಗಳನ್ನು ಕಳೆಯಬೇಕು. ಅನುಭಾವ ಜೀವ ನದ ಆನಂದದ ವಚನ ಇದು.ಭಕ್ತಿಪಕ್ಷದ ಶ್ರೇಷ್ಠವಚನ ಇದು

ಜೀವನ ಹೇಗೆ ಸ್ವೀಕಾರ ಮಾಡಬೇಕೆನ್ನುವ ಜೀವನ ಪ್ರೀತಿ ಯನ್ನು ಅಕ್ಕನವರು ಈವಚನದಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಭಕ್ತಿಯ ಆಟ ವಾಡುವುದು, ಶರಣರ ಕಥೆಗಳನ್ನು ಹಾಡುವುದು,ಹೇಳುವುದು, ಕೇಳುವುದು. ನಗುವುದು,ನಗುತ್ತ ಆನಂದದ ಮಹಾತ್ಮರ ಕಥೆಗಳನ್ನು ಮನನ ಮಾಡುವುದು. ಶರಣರ ಜೊತೆ ಹಾಡುತ್ತ ನಲಿಯುತ್ತ ನಗೆಯಿಂದಿರಬೇಕು.ದೇವರುಕೊಟ್ಟಿರುವಈ ಆಯುಷ್ಯವನ್ನು ಆನಂದದಿಂದ ಕಳೆಯಬೇಕು.

5)ಆಯತ ಸ್ವಾಯತ ಅನುಭಾವವ ನಾನೆತ್ತ ಬಲ್ಲೆನಯ್ಯಾ ಗುರು ಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನವಂ ಸಮರ್ಪಿಸಿ, ಅಹಂಕಾರವಳಿದಿಹಂತಹ ಪುರಾತನರ ಮನೆಯಲ್ಲಿ

ನೃತ್ಯರ ನೃತ್ಯಳಾಗಿಪ್ಪೆನಯ್ಯಾ. ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಗಣಂಗಳಲ್ಲದನ್ಯವ ನಾನರಿಯೆನಯ್ಯಾ.

ಪದಗಳ ಅರ್ಥ

ಆಯತ-ಇಷ್ಟಲಿಂಗದೀಕ್ಷೆ

ಸ್ವಾಯತ-ಇಷ್ಟಲಿಂಗಪೂಜೆ.

ಆನುಭಾವ-ದಿವ್ಯಾನುಭವ

ಅಭಿಮಾನ-ವ್ಯಕ್ತಿತ್ವ,

ಅಹಂಕಾರ-ನಾನು,ನನ್ನದು.

ಪುರಾತನರು-ಪೂರ್ವಶರ

ವಚನದ ಅರ್ಥ

ಆಯತ ಸ್ವಾಯತ ನಾನೆತ್ತ ಬಲ್ಲೆನಯ್ಯ? ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನವನರ್ಪಿಸಿ ಅಹಂಕಾರವಳಿದ ಪುರಾತನರ ಮನೆಯಲ್ಲಿ ನೃತ್ಯಳಾಗಿಪ್ಪೆನಯ್ಯ. ಅಕ್ಕ

ಮಾಡಿರಬೇಕು .ನನಗೆ ಏನೂ ತಿಳಿಯದು. ಶರಣರ ಸೇವೆಯಲ್ಲಿ ದಿನಕಳೆಯುವೆ ನೆಂಬ ವಿನಯವನ್ನು ಅಕ್ಕನವರು ವ್ಯಕ್ತಮಾಡಿದ್ದಾರೆ. ಲಿಂಗದೀಕ್ಷೆಯ ವಿಚಾರವಾಗಲಿ, ಲಿಂಗಪೂಜೆಯ ವಿಚಾರವಾಗಲಿ ನನಗೆ ತಿಳಿಯದು. ಯಾರುಗುರುಲಿಂಗ ಜಂಗಮದ ಸೇವೆಯಲ್ಲಿ ಕೃತಾರ್ಥತೆಯನ್ನು ಕಾಣುತ್ತಾರೊ ಅಂತಹವರ ಸೇವೆಯಲ್ಲಿ ನಾನೂ ಸೇವಕಳಾಗಿರುತ್ತೇನೆ. ನನಗೆ ಚೆನ್ನಮಲ್ಲಿಕಾರ್ಜುನನ ಶರಣರಸೇವೆಯಲ್ಲದೆಲ್ಲದೆ ಬೇರೇನೂ ತಿಳಿಯದು ಎನ್ನುವ ವಿನಯ ಅವರದು. ಅವರಲ್ಲಿ ಪರಿಪೂರ್ಣತೆಯ ಹಂಬಲ ಅಪಾರ ಇದೆ. ಪುರಾತನರು ಯಾರು ? ಹಿರಿಯರು. ಹಿರಿಯ ತನ ಹೇಗೆಬಂತು ಅರ್ಥ, ಪ್ರಾಣ, ಅಭಿಮಾನ, ಅಹಂಕಾರಗಳನ್ನು ಶರಣರ ಪಾದಕ್ಕೆ ಹಾಕಿದವರು ಪುರಾತನರು . ಅವರ ಸೇವೆಯಲ್ಲಿ ಧನ್ಯತೆ ಕಾಣುತ್ತೇನೆ.

6)ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡಯ್ಯ.

ಏನ ಮಾಡಿದಡೆಯೂ ನಾನಂಜುವಳಲ್ಲ.

ತರಗೆಲೆಯ ಮೆಲಿದು ನಾನಿಹೆನು.

ಸುರಗಿಯ ಮೇಲೊರಗಿ ನಿದ್ರೆಗೈವೆನು.

ಚೆನ್ನಮಲ್ಲಿಕಾರ್ಜುನಯ್ಯ ಕರಕರ ಕಾಡಿದರೆ

ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ದಳಹೆನು.

ಪದಗಳ ಅರ್ಥ

ಆಳಿಗೊಳಲು ಬೇಡ-ಬೇಕಾಬಿಟ್ಟಿ ನಡೆಸಿಕೊಳ್ಳಬೇಡ, ಸುರಗಿ-ಖಡ್ಗ, ಮುಳ್ಳಿನ ಸುರಗಿ ಹೂವು. ಪರಿಮಳವೂಇದೆ ಚುಚ್ಚುವ ಸಣ್ಣ ಸಣ್ಣ ಮುಳ್ಳೂ ಇದೆ.

ಕರಕರ- ಪೀಡಿಸು ವುದು, ಕಾಡುವುದು.

ಶುದ್ದಳು- ಪೂರ್ಣಳು, ತೃಪ್ತಳು .

ಅರೂ ಇಲ್ಲದವಳೆಂದು ಆಳಿ ಗಳಲು ಬೇಡ ಕಂಡಯ್ಯ. ಏನ ಮಾಡಿದಡೆಯೂ ನಾನಂಜುವವಳಲ್ಲ. ಯಾರೂ ಇಲ್ಲ ಎಂದು ನನ್ನನ್ನು ಆಳುವುದಕ್ಕೆ, ನಿರ್ಲಕ್ಷ್ಯದಿಂದ ನೋಡಬೇಡ. ನೀನು ಏನು ಕಿರು ಕುಳ ನೀಡಿದರೂ ನಾನು ಹೆದರುವವಳೇನು ಅಲ್ಲ. ತರಗೆಲೆಯ ಮೆಲಿದು ನಾನಿ ಹೆನು. ಸುರಗಿಯ ಮೇಲೊರಗಿ ನಾನಿಹೆನು. ಹಸಿವಾದಾಗ ರಾಜಭೋಜನ ಬೇಕೆಂದೇನೂ ಇಲ್ಲ. ತರಗಲೆ ಊಟಮಾಡಿಕೊಂಡಿರುತ್ತೇನೆ. ಮಲಗಲು ಪಲ್ಲಂಗ, ಹಾಸಿಗೆ ಬೇಕೆಂದೇನೂ ಇಲ್ಲ. ಖಡ್ಗದ ತುದಿಯಂತಹ ಮೊನಚಿನ ಮೇಲೂ ಮಲಗಿ ದಿನ ಕಳೆಯುವೆನು.ಚೆನ್ನಮಲ್ಲಿಕಾರ್ಜುನ ಕರಕರ ಕಾಡಿದರೆ ಒಡಲನೂ ಪ್ರಾಣವನೂ ನಿನಗೊಪ್ಪಿಸಿ ಶುದ್ಧಳಹೆನು. ನೀನು ಬಹಳ ಕಾಡಿದರೂ ದೇಹ, ಪ್ರಾಣವನ್ನು ನಿನ ಗೊಪ್ಪಿಸಿ ಪರಿಶುದ್ಧಳಾಗುತ್ತೇನೆ. ಅಕ್ಕಮಹಾದೇವಿಯವರಿಗೆ ವಯಸ್ಸು ಸಣ್ಣದಾದರೂ ಧೈರ್ಯ ದೊಡ್ಡದು. ಅರಿವು ಹಿರಿದು. ದೇವರನ್ನೆ ಗೆಲ್ಲುವ ಉತ್ಸಾಹ ಅವರದು.

ಪರಮಾತ್ಮನೊಂದಿಗೆ ಸಂಭಾಷಿಸುತ್ತಿದ್ದಾರೆ. ಆರೂ ಇಲ್ಲದವಳೆಂದು ಆಳಿಗೊ ಳಲುಬೇಡ ಕಂಡಯ್ಯ. ಅಕ್ಕಮಹಾದೇವಿಯವರು ತಪಸ್ಸಿಗೆ ಕುಳಿತ ಕಾಲಕ್ಕೆ ಬರೆದ ವಚನವಿದು. ಜೊತೆ ಯಾರೂ ಇಲ್ಲ. ಶ್ರೀಶೈಲದ ಕಾಡಾರಣ್ಯ.ಆ ಭಯವನ್ನು ಗೆಲ್ಲುವ ಪ್ರಯತ್ನ ಈವಚನ. ಅಕ್ಕಮಹಾದೇವಿ ಒಬ್ಬಳೆ ಕಾಡಾರಣ್ಯದಲ್ಲಿದ್ದಾಳೆಂದು ಹೆದರಿಸಲು ಬರುವೆಯಾ.?ಏನು ಮಾಡಿದರೂ ನಾನಂಜುವಳಲ್ಲ. ನೀನು ನನ್ನನ್ನು ಹೆದರಿಸಲುನೋಡಿದರೆ ನಾನು ಹೆದರುವವಳಲ್ಲ. ಎಲೆ ತಿಂದು ಜೀವನ ಮಾಡುತ್ತೇನೆ. ಖಡ್ಗ, ಮುಳ್ಳಿನ ಮೇಲೂ ಮಲಗಿ ನಿದ್ರಿಸಬಲ್ಲೆನು. ಋಷಿಮುನಿಗಳು ಎಲೆ ಸೊಪ್ಪು ತಿಂದು ಜೀವನ ಮಾಡಿದ್ದಾರೆ. ಬಂಡೆ, ಕಲ್ಲು, ಮುಳ್ಳುನೆಲ ಎಲ್ಲಿ ಬೇಕಾದರೂ ಮಲಗಿ ಕಾಲಕಳೆಯುತ್ತೇನೆ. ಈಜೀವನಕ್ಕೆ ಬಂದಿರುವುದು ಸುಖಪಡುವುದಕ್ಕಲ್ಲ. ಪರಮಾತ್ಮನೆ ನಿನ್ನನ್ನು ಸಾಧಿಸಿಕೊಳ್ಳುವುದಕ್ಕೆ. ಚೆನ್ನಮಲ್ಲಿಕಾರ್ಜುನಯ್ಯ ಕರಕರ ಕಾಡಿ ದರೆ ಒಡಲನೂ ಪ್ರಾಣವನು ಒಪ್ಪಿಸಿ ಶುದ್ಧಳಹೆನು. ಇಷ್ಟೆಲ್ಲ ಕಷ್ಟ ಎದುರಿಸಲು ನಾನು ಸಿದ್ಧಳಿದ್ದರೂ ನೀನು ಮತ್ತೂ ಕಾಡಲು ತೊಡಗಿದರೆ ನಾನು ನನ್ನ ಪ್ರಾಣವನ್ನೆ ನಿನಗೆ ಒಪ್ಪಿಸುತ್ತೇನೆ ಅಕ್ಕಮಹಾದೇವಿಯವರು ಸುಕೋಮಲ ಸುಂದರ ತರುಣ ಹೆಣ್ಣುಮಗಳು ತನ್ನ ಬದುಕಿನಲ್ಲಿ ದುಃಖಎಂದರೇನೆಂಬುದನ್ನರಿಯದ ಹೆಣ್ಣು ಮಗಳು ಅಂತಹವರಿಗೆ ದುಃಖ ಸಮುದ್ರವೇ ಎದುರಾಯಿತು. ಹೆದರಲಿಲ್ಲ ಅಕ್ಕನವರು. ದುಃಖದ ದಾವಾನಲವನ್ನೆ ಗಟಗಟ ಕುಡಿದರು. ಅವರು ಧೀರರು ಅನುಪಮರು. ಹೋಲಿಸಲು ಇನ್ನೊಂದು ಹೋಲಿಕೆಯಿಲ್ಲ.

7) ಆವ ವಿದ್ಯವ ಕಲಿತಡೇನು? ಸಾವ ವಿದ್ಯೆ ಬೆನ್ನಬಿಡದು.

ಅಶನವ ತೊರೆದಡೇನು? ವ್ಯಸನವ ಮರೆದಡೇನು? ಉಸಿರ ಹಿಡಿದಡೇನು? ಬಸಿರ ಕಟ್ಟಿದಡೇನು? ಚೆನ್ನಮಲ್ಲಿಕಾರ್ಜುನದೇವಯ್ಯಾ ನೆಲ ತಳವಾರನಾದಡೆ

ಕಳ್ಳನೆಲ್ಲಿಗೆ ಹೋಹನು.

ಪದಗಳ ಅರ್ಥ

ಆಶನ-ಅನ್ನ,

ವ್ಯಸನ-ವಿಷಯಾಸಕ್ತಿ,

ಉಸಿರು-ಉಸಿರಾಟ, ಪ್ರಾಣ,

ಬಸಿರು-ಹೊಟ್ಟೆ

ತಳವಾರ-ಊರು ಕಾಯುವವ, ಪಹರೆಯವ ಪೋಲೀಸಿನವ, ಗೂರ್ಖ.

ವಚನದ ಅರ್ಥ

ಆವ ವಿದ್ಯವ ಕಲಿತಡೇನು? ಸಾವ ವಿದ್ಯವ ಮಾಣದನ್ನಕ್ಕ, ಎಷ್ಟೇ ವಿದ್ಯೆ ಕಲಿತರೂ, ಸಾವನ್ನು ಮಾತ್ರ ತಪ್ಪಿಸಲು ಬರುವುದಿಲ್ಲ. ಅಶನವ ತೊರೆದರೇನು? ವ್ಯಸನವ ಮರೆದರೇನು? ಅನ್ನ ಬಿಟ್ಟು ಉಪವಾಸ ಇರಲಿ, ವ್ಯಸನಗಳನ್ನು ಬಿಟ್ಟು ಸದಾಚಾರಿಯಾಗಿರಲಿ ಎಲ್ಲರಿಗೂ ಒಂದು ದಿನ ಸಾವು ಮಾತ್ರ ನಿಶ್ಚಯ. ಉಸಿರ ಹಿಡಿದ ರೇನು? ಬಸಿರ ಕಟ್ಟಿದರೇನು? ಪ್ರಾಣಾಯಾಮ ಮಾಡಿ ಉಸಿರು ಬಂಧಿಸುವುದನ್ನು ಕಲಿಯಲಿ .ಏನೆಲ್ಲ ಹಠಯೋಗ ಮಾಡಲಿ?ನಿರಾಹಾರಿ ಇರಲಿ. ಉಸಿರನ್ನೆ ನಿಲ್ಲಿಸಲಿ. ಹೊಟ್ಟೆ ಕಟ್ಟಿ ಊಟಮಾಡುವುದನ್ನೆ ಬಿಡಲಿ, ಸಾವು ಮಾತ್ರ ಶತಸ್ಸಿದ್ಧ. ಒಬ್ಬ ಪಂಡಿತಹೊಳೆ ದಾಟಬೇಕಾಗಿತ್ತು. ದೋಣಿಯಲ್ಲಿಹೊರಟ. ದೋಣಿಸಣ್ಣದು ಇವನು ಅಂಬಿಗ ಇಬ್ಬರೆ ಇದ್ದರು. ದೋಣಿ ಹುಟ್ಟುಹಾಕುವುದರಲ್ಲಿ ಅಂಬಿಗ ಮಗ್ನನಾಗಿದ್ದ. ಪಂಡಿತ ಮಾತಿಗಾರಂಭಿಸಿದ. ಏನಯ್ಯ ನಿನಗೆ ಏನು ವಿದ್ಯೆ ಬರುತೆ?ಕಾವ್ಯ ಗೊತ್ತ? ಇಲ್ಲ ಬುದ್ದಿ. ಶಾಸ್ತ್ರ ಗೊತ್ತ? ಇಲ್ಲ ಬುದ್ದಿ. ವ್ಯಾಕರಣಗೊತ್ತ?. ಇಲ್ಲ ಬುದ್ದಿ. ಅಯ್ಯೋ ನಿನ್ನ ಜೀವನ ಅರ್ಧ ದಂಡ ಆಯಿತಲ್ಲಯ್ಯ. ನಿನಗೆ ಮತ್ತೇನು ಗೊತ್ತು? ಪಂಡಿತ ಕೇಳಿದ. ಅಷ್ಟರಲ್ಲಿ ದೋಣಿ ನೆರೆ ಬಂದು ಮುಳುಗ ತೊಡಗಿತು. ಆಗ ಅಂಬಿಗ ಕೇಳಿದ ಪಂಡಿತರೆ ನಿಮಗೆ ಈಜು ಬರುತ್ತ? ಇಲ್ಲ ಕಣಯ್ಯ. ಈಗ ನಿಮ್ಮ ಜೀವನ ಪೂರ್ಣ ದಂಡ ಎಂದು ಅವ ಜೀವ ಉಳಿಸಿಕೊಳ್ಳಲು ನೀರಿಗೆ ಹಾರಿದ . ದೋಣಿ ಮುಳುಗಿತು. ನೆಲ ತಳವಾರನದಡೆ ಕಳ್ಳನೆಲ್ಲಿ ಅಡಗುವ ?ಮನುಷ್ಯ ತಳವಾರನಾದರೆ ಎಲ್ಲಿಯಾದರೂ ಬಚ್ಚಿಟ್ಟುಕೊಳ್ಳಬಹುದು .ನೆಲ ತಳ ವಾರನಾದರೆ ಕಳ್ಳನೆಲ್ಲಿಯಾದರೂ ಬಚ್ಚಿಟ್ಟುಕೊಳ್ಳಲು ಸಾಧ್ಯವೆ?ಯಾವ ದೇಹವು ನಮಗೆ ಆಧ್ಯಾತ್ಮ ಜೀವನಕ್ಕೆ ಸೋಪಾನವಾಗಬೇಕೊ ಅದೆ ದೇಹವೆ ನಮ್ಮನ್ನು ಮೃತ್ಯುವಿನ ಮನೆಗೆ ತಳ್ಳಿ ಹೋಗಿಬಿಡುವುದಾದರೆ ಮಾಡುವುದಾದರೂ ಏನು? ಇಂತಹ ದೇಹವನ್ನು ನಂಬಿಕೊಂಡು ಅದರ ಇಚ್ಛೆಗಳನ್ನೆಲ್ಲಾ ಪೂರೈಸುತ್ತೇವೆ. ಇದು ಹೇಳದೆ ಕೇಳದೆ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ಹೋಗಿಬಿಡುತ್ತದೆ. ನೆಲ ತಳವಾರನದಡೆ ಕಳ್ಳನಲ್ಲಿ ಅಡಗುವ ತುಂಬ ಮನೋಜ್ಞರೂಪಕ.ಬಿಡಿಸಿದಷ್ಟೂ ಅರ್ಥ.

8) ಆಶೆಯಾಮಿಷವಳಿದು ಹುಸಿ ವಿಷಯಗಳೆಲ್ಲ ಹಿಂಗಿ, ಸಂಶಯ ಸಂಬಂಧ ವಿಸಂಬಂಧವಾಯಿತ್ತು ನೋಡಾ.

ಎನ್ನ ಮನದೊಳಗೆ ಘನಪರಿಣಾಮವ ಕಂಡು

ಮನ ಮಗ್ನವಾಯಿತ್ತಯ್ಯ

ಚೆನ್ನಮಲ್ಲಿಕಾರ್ಜುನಾ.ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನಯ್ಯ.

ಪದಗಳ ಅರ್ಥ

ಆಮಿಷ-ಪ್ರಲೋಬನೆ,

ವಿಷಯ-ಪಂಚವಿಷಯಗಳು, ಶಬ್ದಸ್ಪರ್ಶ, ರೂಪ, ರಸ, ಗಂಧ. ವಿಸಂಬಂಧ-ನಷ್ಟ .

ಘನ-ಪರಬ್ರಹ್ಮ ;

ಪರಿಣಾಮ-ಆನಂದ .

ವಚನದ ಅರ್ಥ

ಆಶೆಯಾಮಿಷವಳಿದು ಹುಸಿವಿಷಯಗಳೆಲ್ಲ ಹಿಂಗಿ ಸಂಶಯ ಸಂಬಂಧ ವಿಸಂಬಂಧ ವಾಯಿತ್ತು ನೋಡಾ. ಆಶೆ, ಆಮಿಷಗಳು ಅಳಿದವು. ಸುಳ್ಳು ವಿಷಯವಾಸನೆಗಳು ನಷ್ಟವಾದವು.ಸಂಶಯ ಸಂಬಂಧ ವಿಸಂಬಂಧವಾಯಿತ್ತು ನೋಡಾ. ಅನುಮಾನಗಳು ಬಗೆಹರಿದವು. ಸಂಬಂಧಗಳು ನಷ್ಟವಾದವು. ಎನ್ನ ಮನದೊಳಗೆ ಘನ ಪರಿಣಾಮವ ಕಂಡು ಮನ ಮಗ್ನವಾಯಿತ್ತಯ್ಯ. ನನ್ನ ಮನಸ್ಸಿನಲ್ಲಿ ಪರಮಾತ್ಮನ ಪರಮಾನಂದವನ್ನು ಕಂಡು ಮನಸ್ಸು ಅಲ್ಲಿಯೆ ತನ್ಮಯವಾಯಿತು. ಚೆನ್ನಮಲ್ಲಿಕಾರ್ಜನ ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನಯ್ಯ. ಪರಮಾತ್ಮನ ಪ್ರಭುದೇವರ ಕರುಣದಿಂದ ಬದುಕಿದೆನು. ಅನುಭವಮಂಟಪದಲ್ಲಿ ಅಕ್ಕನವರು ಕೊಟ್ಟ ಉತ್ತರ ಅಮೋಘ. ಅಕ್ಕನವರಿಗೆ ಕೂಡ ತಮ್ಮ ಉತ್ತರಗಳಿಂದ ತಮಗೆ ಆಶ್ಚರ್ಯವಾಯಿತು. ಇಷ್ಟೊಂದು ಅಮೋಘ ಅನುಭಾವದ ದಿವ್ಯ ಜೀವನ ನನ್ನಲ್ಲಿದೆಯೆ? ಹೌದು ಈಗ ನನ್ನ ಮನಸ್ಸು ಕೂಡ ನಿರಾಳವಾಯಿತು. ನನ್ನ ಮನಸ್ಸಿನಲ್ಲಿ ಪರಮಾತ್ಮದ ಆನಂದ ಸ್ಥಾಯಿಯಾಗಿರುವುದನ್ನು ಕಂಡು ಮನಸ್ಸು ಅಲ್ಲಿಯೆ ಲೀನವಾಗಿದೆ. ನಿಜವಾಗಿಯೂ ನಾನು ಧನ್ಯಳು. ನನ್ನಲ್ಲಿ ಇಂತಹ ಘನ ಉತ್ತರ ಹೊರಡಿಸಿದ ಪ್ರಭುದೇವರಿಗೆ ನಾನು ಕೃತಾರ್ಥಳು ಅವರ ಅನುಗ್ರಹದಿಂದ ಬದುಕಿದೆ. ಈಗ ಅಕ್ಕಮಹಾದೇವಿಯವರು ಗುರು,ಜ್ಞಾನಿ,ಮಹಾತ್ಮಋಷಿಸಂತ ಹೆಸರಿಗೆ ಭಾಜನ ರಾದರು.ಈಗ ಅವರು ಲೋಕೋತ್ತರವಾದ ಪರೀಕ್ಷೆಯನ್ನು ಗೆದ್ದು ಬಯಲನ್ನು ಮೀರಿದರು. ಅವರ ದರ್ಶನ, ಸಾಕ್ಷಾತ್ಕಾರ ಲೋಕಕ್ಕೆ ಭಾಗ್ಯ.ಜನರು ಧನ್ಯ.

9).ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ

ವಿಶುದ್ಧಿ,ಆಜ್ಞೆಯವ ನುಡಿದರೇನು?

ಆದಿಅನಾದಿಯ ಸುದ್ದಿಯ ಹೇಳಿದರೇನು?

ತನ್ನಲ್ಲಿದ್ದುದ ತಾನರಿಯದನ್ನಕ್ಕರ.

ಉನ್ಮನಿಯ ರಭಸದ ಮನಪವನದ ಮೇಲೆ

ಚೆನ್ನಮಲ್ಲಿಕಾರ್ಜುನಯ್ಯನ ಭೇಧಿಸಲರಿಯರು.

ವಚನದ ಅರ್ಥ

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆಯವ ನುಡಿದರೇನು?ಈ ಆರು ಚಕ್ರಗಳ ಹೆಸರು ಹೇಳಿ ಮಾತನಾಡಿದರೇನಾಯಿತು?ಆದಿಅನಾದಿಯ ಸುದ್ದಿಯ ಹೇಳಿದರೇನು? ತನ್ನಲ್ಲಿದ್ದುದ ತಾನರಿಯದನ್ನಕ್ಕ ಆದಿ, ಅನಾದಿ ಈ ವಿಚಾರವಾಗಿ ಹೇಳಿದರೇನಾಯಿತು?

ತನ್ನಲ್ಲಿರುವುದನ್ನು ತಿಳಿಯದೆ ಏನು ಮಾತನಾಡಿದರೂ ಉಪಯೋಗವಿಲ್ಲ. ಉನ್ಮನಿಯ ರಭಸದ ಮನಪವನದ ಮೇಲೆ ಚೆನ್ನ ಮಲ್ಲಿಕಾರ್ಜುನಯ್ಯನ ಭೇಧಿಸಲರಿಯರು. ಏರುವ ಇಳಿಯುವ ಗಾಳಿಯ ನಡುವೆ ಇರುವ ಈ ಮನಸ್ಸನ್ನು ತಿಳಿಯದವರು ಯೋಗ, ಚಕ್ರಗಳ ವಿಚಾರ ಮಾತನಾಡಿ ಏನೂ ಉಪಯೋಗವಿಲ್ಲ. ಅನೇಕರು ಆಧ್ಯಾತ್ಮದ ವಿಚಾರವಾಗಿ ಷಟ್ ಚಕ್ರಗಳ ವಿಚಾರವಾಗಿ ನಿರರ್ಗಳವಾಗಿ ಮಾತನಾಡುತ್ತಾರೆ. ಇನ್ನು ಸೃಷ್ಟಿ, ಜೀವ, ಜಗತ್ತು ಬ್ರಹ್ಮದ ಬಗೆಗೂ ಬೇಕಾದಷ್ಟು ವಿಚಾರಗಳನ್ನು ಮಾತನಾಡುತ್ತಾರೆ. ಇವರು ಇಂತಹ ವಿಷಯಗಳನ್ನು ಕುರಿತು ಎಷ್ಟೇ ಮಾತನಾಡಿದರೂ ಏನೂ ಉಪಯೋಗವಿಲ್ಲ. ಮೊದಲು ತಾನು, ತನ್ನಲ್ಲಿರುವುದನ್ನು ತಾನು ತಿಳಿದುಕೊಳ್ಳಬೇಕು. ತನ್ನನ್ನು ತಿಳಿಯದೆ ಬೇರೆ ಏನನ್ನು ತಿಳಿದರೂ ಉಪಯೋಗವಿಲ್ಲ. ಈ ಮನಸ್ಸು ಏನಿದೆ ಇದು ಯಾವುದರ ಬಲದಲ್ಲಿ ನಿಂತಿದೆ, ಅದನ್ನು ಮೊದಲುತಿಳಿ. ತನ್ನಲ್ಲಿದ್ದುದ ತಾನು ತಿಳಿಯುವುದು ಎಂದರೇನು?ನಮ್ಮಲ್ಲಿ ಇರುವುದು ಯಾವುದು? ವಿಶೇಷವಾಗಿರುವುದು ಯಾವುದು? ಯಾವುದು ಹೋದರೆ ಉಳಿದುದೆಲ್ಲವೂ ಹೋಗಿಬಿಡುತ್ತದೆ. ಅದು ಪ್ರಾಣ. ಆ ಪ್ರಾಣ ಬಂದುದೆಲ್ಲಿಂದ? ಬಂದ ಕಾರಣವಾದರು ಯಾವುದು? ಅದನ್ನು ತಿಳಿದರೆ ಎಲ್ಲವೂ ತಿಳಿದಂತೆ. ಪ್ರಾಣ ಇಲ್ಲಿರಲು ಮುಖ್ಯ ಬೇಕೇನು? ಅದು ಮೊದಲು ಪ್ರಾಣವಾಯುಬೇಕು. ನಂತರ ಈದೇಹಕ್ಕೆ ಅನ್ನಾದಿಗಳು ಬೇಕು. ಈ ಅನ್ನಾದಿಗಳನ್ನು ಪಡೆಯಲು ನಮಗೆ ಇಲ್ಲಿ ಏನೆಲ್ಲ ರಾದ್ಧಾಂತವಾಗಿಬಿಡುತ್ತದೆ ದೇಹ, ಪೋಷಣೆಯಿಂದಾಗಿಯೆ ಅದಕ್ಕೆ ಸಂಘರ್ಷ ಒದಗಿಬಂದು ಅನೇಕತಪ್ಪುಗಳು, ಪ್ರಮಾದಗಳು ಆಗಿಹೋಗುತ್ತವೆ. ಈ ಪ್ರಮಾದಗಳೆ ನಮ್ಮನ್ನು ಮತ್ತೆ ಮತ್ತೆ ಭವಕ್ಕೆ ಎಳೆದು

ತರುತ್ತವೆ .ಉನ್ಮನಿಯ ರಭಸದ ಮನ ಪವನದ ಮೇಲೆ ಚೆನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯದವರು. ನಮ್ಮ ಈ ಮನಸ್ಸೇನಿದೆ ಇದು ದೇಹಕ್ಕೆ ಅಧೀನವಾಗಿ ಆ ದಾರಿಯಲ್ಲಿ ನಡೆದಿದೆ. ಈಮನಸ್ಸನ್ನು ಪ್ರಾಣವಾಯುವಿನ ಸ್ತಂಬನದಿಂದ ನಿಯಂತ್ರಿಸಬೇಕು. ಆಗ ಮನಸ್ಸು ಕೈಗೆ ಸಿಗುತ್ತದೆ. ಮನಸ್ಸು ಕೈಗೆ ಸಿಕ್ಕರೆ ಅದಕ್ಕೆ ಸಮಾಧಾನ ಚಿತ್ತವನ್ನು ನಾವು ಸಾಧನೆ ಮೂಲಕ ಕೊಡಬೇಕು. ಆಗ ಚೆನ್ನಮಲ್ಲಿ ಕಾರ್ಜುನಯ್ಯನನ್ನು ಕಾಣಲು ನಮಗೆ ದಾರಿ ಸಿಗುತ್ತದೆ. ನಮ್ಮ ಮೂಲ ನಮಗೆ ಸ್ಪುರಣವಾಗುತ್ತದೆ.

10) ಆಕಾರವಿಲ್ಲದ ನಿರಾಕಾರ ಲಿಂಗವ

ಕೈಯಲ್ಲಿ ಹಿಡಿದು ಕಟ್ಟಿದೆವೆಂಬರು ಅಜ್ಞಾನಿ ಜೀವಿಗಳು.

ಹರಿಬ್ರಹ್ಮರು ವೇದ ಪುರಾಣ ಆಗಮಂಗಳು

ಅರಸಿ ಕಾಣದ ಲಿಂಗ

ಭಕ್ತಿಗೆ ಫಲವಲ್ಲದೆ ಲಿಂಗವಿಲ್ಲ.

ಕರ್ಮಕ್ಕೆ ನರಕವಲ್ಲದೆ ಲಿಂಗವಿಲ್ಲ.

ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ. ವೈರಾಗ್ಯಕ್ಕೆ ಮುಕ್ತಿಯಲ್ಲದೆ ಲಿಂಗವಿಲ್ಲ.

ಇದು ಕಾರಣ ತನ್ನ ತಾನರಿದು ತಾನಾದಡೆ, ಚೆನ್ನಮಲ್ಲಿಕಾರ್ಜುನ ತಾನೆ ಬೇರಿಲ್ಲ.

ವಚನದ ಅರ್ಥ

ಆಕಾರವಲ್ಲದ ನಿರಾಕಾರಲಿಂಗವ ಕೈಯಲ್ಲಿ ಹಿಡಿದು ಕಟ್ಟಿದೆವೆಂಬರು ಅಜ್ಞಾನಿ ಜೀವಿಗಳು.ಕೆಲವರು ನಾವೂ ಲಿಂಗಾಯತರಾದೆವೆಂದು

ಹೇಳಿಕೊಳ್ಳುತ್ತಾರೆ.ಆಕಾರವಿರದ ನಿರಾಕಾರ ಲಿಂಗವನ್ನು ಕೈಯಲ್ಲಿ ಹಿಡಿದಿರುತ್ತಾರೆ. ಲಿಂಗವನ್ನು ಕೈಯಲ್ಲಿ ಹಿಡಿಯಲುಬರುವುದೆ? ಅದು ಹರಿಬ್ರಹ್ಮವೇದಪುರಾಣಾಗಮಅರಸಿಕಾಣದ ಲಿಂಗ . ಹರಿಬ್ರಹ್ಮರು ಕಾಣಲಾಗಲಿಲ್ಲ. ವೇದಪುರಾಣಾಗಮಗಳೂ ಕಾಣಲಾಗಲಿಲ್ಲ. ಭಕ್ತಿಗೆ ಫಲವಲ್ಲದೆ ಲಿಂಗವಿಲ್ಲ. ಕರ್ಮಕ್ಕೆ ನರಕವಲ್ಲದೆ ಲಿಂಗವಿಲ್ಲ. ಭಕ್ತಿಯನ್ನು ಫಲದಾಶೆ ಇರಿಸಿಕೊಂಡು ಮಾಡುತ್ತಾರೆ.ಫಲಸಿಗುತ್ತದೆ ಲಿಂಗ ಸಿಗುವುದಿಲ್ಲ. ಇನ್ನು ಅನೇಕ ಕರ್ಮಗಳನ್ನು ಮಾಡುತ್ತಾರೆ. ಇದರಿಂದ ನರಕ ಪ್ರಾಪ್ತಿಯಾಗುವುದೆ ವಿನಹ ಲಿಂಗಪ್ರಾಪ್ತಿಯಾಗುವುದಿಲ್ಲ. ಜ್ಞಾನಕ್ಕೆ ಪರಿಭ್ರಮಣವಲ್ಲದೆ ಲಿಂಗವಿಲ್ಲ.ವೈರಾಗ್ಯಕ್ಕೆ ಮುಕ್ತಿಯಿಲ್ಲದೆ ಲಿಂಗವಿಲ್ಲ. ಜ್ಞಾನದಿಂದ ಸುತ್ತುವುದಾಗುತ್ತದೆ. ಪರಮಾತ್ಮ ಸಿಗುವುದಿಲ್ಲ. ವೈರಾಗ್ಯದಿಂದ ಬಿಡುಗಡೆ ಸಿಗುತ್ತದೆ. ಲಿಂಗ ಸಿಗುವುದಿಲ್ಲ. ಇದು ಕಾರಣ ತನ್ನ ತಾನರಿದಡೆ ಚೆನ್ನಮಲ್ಲಿಕಾರ್ಜುನ ತಾನೆ ಬೇರಿಲ್ಲ. ಆದುದರಿಂದ ತನ್ನನ್ನು ತಾನು ತಿಳಿದರೆ ಲಿಂಗವನ್ನು ತಿಳಿದಂತೆ. ಚೆನ್ನಮಲ್ಲಿಕಾರ್ಜುನ ಬೇರೆ ಏನೂ ಇಲ್ಲ. ತನ್ನ ತಾ ತಿಳಿಯುವುದೆ ಚೆನ್ನಮಲ್ಲಿಕಾರ್ಜುನನನ್ನು ತಿಳಿದಂತೆ . ಚಿಲಿಮಿಲಿ ಎಂದೋದುವ ಗಿಳಿ ಗಳಿರಾ ನೀವು ಕಾಣಿರೇ ನೀವು ಕಾಣಿರೇ ಎಂದು ಕೇಳಿದ ಅಕ್ಕ ಮಹಾದೇವಿಯ ವರು ಜ್ಞಾನೋದಯದ ನಂತರ ಏರಿದ ನಿಲವು ಮೇಲಿನ ವಚನ.

11) ಆತ್ಮ ನಿರ್ಯಾಣ, ಕರಣ ವಿಶ್ರಾಂತಿ, ಅಂಗಲೇಪನ,

ಕ್ರಿಯಾಜ್ಞಾನ, ಸರ್ವಾಚಾರ, ಸಹಜಸಮರಸ ನಿರಹಂಕಾರ ನಿಷ್ಪತ್ತಿಯಿಂದೈಕ್ಯನನಿಜಸ್ಥಲ ಆತ್ಮಜ್ಞಾನದಿಂದ ಜ್ಯೋತಿರ್ಲಿಂಗವ ಕಾಣಬಹುದು. ಮಾತಿನ ಮಾತಿಗೆ ಸಿಲುಕುವನಲ್ಲ.

ಧಾತುಗೆಡಿಸಿ ಮನವ ನೋಡಿ ಕಾಡುವನು. ಆತ್ಮನನರಿದಡೆ ಆತನೆ ಶಿವಯೋಗಿ,

ಆತನ ಪಾದಕ್ಕೆ ಶರಣೆಂಬೆ ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಆತ್ಮನಿರ್ಯಣ ಕರಣ ವಿಶ್ರಾಂತಿ .ಅಂಗಲೇಪನ, ಕ್ರಿಯಾಜ್ಞಾನ, ಸರ್ವಾಚಾ ರಸಹಜ ಸಮರಸ, ಆತ್ಮ ನಿರ್ಯಾಣವೆಂದರೆ ಕರಣಗಳಿಗೆ ವಿಶ್ರಾಂತಿ ಕೊಡುವುದು. ಅಂಗಲೇಪನವೆಂದರೆ ಭಸ್ಮಧಾರಣೆ. ಅಹಿತವನ್ನು ಜೀವನದಲ್ಲಿ ಭಸ್ಮ ಮಾಡಿಕೊಳ್ಳು. ವುದು. ಕ್ರಿಯಾಜ್ಞಾನವೆಂದರೆ ಎಲ್ಲ ಸದಾಚಾರಗಳನ್ನು ಅಳವಡಿಸಿ ಕೊಳ್ಳುವುದೆ ಆಗಿದೆ. ಸರ್ವಾಚಾರಸಂಪತ್ತು ಅಳವಟ್ಟರೆ ಪರಮಾತ್ಮನಲ್ಲಿ ಸಮರಸವಾದೆವೆಂದೆ ಅರ್ಥ. ನಿರಹಂಕಾರ ನಿಷ್ಪತ್ತಿಯಿಂದ ಐಕ್ಯನ ನಿಜಸ್ಥಲ. ನಮ್ಮಲ್ಲಿ ನಿರಹಂಕಾರ ಉಂಟಾದರೆ, ಅಂದರೆ ಅಹಂಕಾರ ನಿರಸನವಾದರೆ ಐಕ್ಯಸ್ಥಲಕ್ಕೆ ಬಂದು ಮುಟ್ಟಿದೆವೆಂದೆ ಅರ್ಥ. ಯಾರು ಲಿಂಗೈಕ್ಯರಾಗಬಯಸಯವರೊ ಅವರು ಮೊದಲು ಅಹಂಕಾರ ನಿರಸನಗೊಳಿಸಿಕೊಳ್ಳಬೇಕು. ಆತ್ಮಜ್ಞಾನದಿಂದ ಜ್ಯೋತಿರ್ಲಿಂಗವ ಕಾಣಬಹುದು. ಆತ್ಮಜ್ಞಾನವಾಗಬೇಕಾದರೆ ಪರಿಪೂರ್ಣ ಶರಣಾಗತಿ ಮೊದಲು ಅಳವಡಬೇಕು. ಈ ಆತ್ಮಜ್ಞಾನದಿಂದ ಪರಮಾತ್ಮದರ್ಶನವಾಗುವುದು. ಮಾತಿನಮಾತಿಗೆ ಸಿಲುಕುವ ನಲ್ಲ. ಧಾತುಗೆಡಿಸಿ ಮನವ ನೋಡಿ ಕಾಡುವನು. ಈ ಆತ್ಮಜ್ಞಾನವು ಕೇವಲ ಮಾತಿನ ಜಾಲಕ್ಕೆ ಸಿಗುವುದಿಲ್ಲ. ಆತನು ನಮ್ಮನ್ನು ಧೈರ್ಯಗೆಡಿಸಿ ಕಾಡುತ್ತಾನೆ. ಈ ಉಪಟಳ ವನ್ನು

ನಿಗ್ರಹಿಸಿದೆವಾದರೆ ನಾವು ಜ್ಯೋತಿಯನ್ನು ಕಾಣುವ ಯೊಗ್ಯತೆ ಪಡೆಯುತ್ತೇವೆ.ಆತ್ಮನನರಿದಡೆ ಆತನೆ ಶಿವಯೋಗಿ ಯಾರು ಶಿವಯೋಗಿ. ತನ್ನಾತ್ಮನನ್ನು ಯಾರು ಅರಿತಿರುವನೊ ಆತನೆ ಶಿವಯೋಗಿ. ಆತ್ಮಜ್ಞಾನಿಯೆ ಶಿವಯೋಗಿ, ಆತನ ಪಾದಕ್ಕೆ ಶರಣೆಂಬೆ ಚೆನ್ನಮಲ್ಲಿಕಾರ್ಜುನಾ. ಶಿವಯೋಗಿಯಚರಣಗಳಿಗೆ ನಮಸ್ಕಾರಗಳು.

12) ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ. ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ.

ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರಹು, ಅಜ್ಞಾನದಿಂ ಕಾಮವಿಕಾರ ಹೆಚ್ಚಿ, ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರ,

ಭಾವವಿಕಾರ, ವಾಯುವಿಕಾರವನುಂಟುಮಾಡಿ,

ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿಪೋಷಣ ಬೇಡ.

ಅತಿ ಪೋಷಣೆ ಮೃತ್ಯುವೆಂದುದು.

ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂ ತನುಮಾತ್ರವಿದ್ದರೆ ಸಾಲದೆ ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು.

ತನು ಪೋಷಣೆಯಿಂದ ತಾಮಸ ಹೆಚ್ಚಿ, ಅಜ್ಞಾನದಿಂ ವಿರಕ್ತಿ ಹಾನಿ, ಅರಿವು ನಷ್ಟ, ಪರವು ದೂರ, ನಿರಕೆ ನಿಲವಿಲ್ಲದ ಕಾರಣ.

ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯಾ.

ಪದಗಳ ಅರ್ಥ

ಕಿರಿದು-ಕಡಿಮೆ.

ವ್ಯಾಧಿ-ರೋಗ

ತಾಮಸ-ತಮೋಗುಣ, ಜಡತ್ವ ದೆಚ್ಚುವುದು, ಅಜ್ಞಾನ ಅಧಿಕವಾಗುವುದು.

ವಿಕಾರ-ಅನಾರೋಗ್ಯ, ವಿಕೃತಿ .ಹೀನವಾದುದು

ಯತಿತ್ವ-ಅನುಭಾವ ಜೀವನ. ,

ಸೃಷ್ಟಿ-ಹುಟ್ಟು, ಸಾವು.

ವಚನದ ಅರ್ಥ

ಆಹಾರವ ಕಿರಿದು ಮಾಡಿರಣ್ಣ, ಆಹಾರವ ಕಿರಿದು ಮಾಡಿರಣ್ಯ ಆಹಾರದಿಂದ ಹಾನಿವೃದ್ಧಿ, ಆಹರದಿಂದ ವ್ಯಾಧಿ ಬಲಿವುದಯ್ಯ, ಊಟವನ್ನು ಕಡಿಮೆಮಾಡಿರಿ.ಊಟವನ್ನು ಕಡಿಮೆ ಮಾಡಿರಿ. ಊಟದಿಂದಲೆ ಆರೋಗ್ಯ ಊಟದಿಂದಲೆ ಅನಾರೋಗ್ಯ. ಆಹಾರದಿಂದ ರೋಗ ಬಲವಾಗುತ್ತದೆ. ಹಿತಮಿತ ಆಹಾರ ಒಳ್ಳೆಯದು. ಅತಿ ಆಹಾರ ಕೆಟ್ಟದ್ದು. ಆಹಾರದಿಂದ ನಿದ್ರೆ, ನಿದ್ರೆಯಿಂದ ತಾಮಸ, ಅಜ್ಞಾನಮೈಮರಹು.ಅತಿ ಆಹಾರ ನಿದ್ರೆ ಜಡ ತರುತ್ತದೆ. ಅತಿನಿದ್ರೆಯಿಂದ ಅವಿವೇಕ ಹೆಚ್ಚುತ್ತದೆ. ಎಚ್ಚರ,ವಿವೇಕ ಕಡಿಮೆಯಾಗುತ್ತದೆ. ಅಜ್ಞಾನದಿಂದ ಕಾಮವಿಕಾರ ಹೆಚ್ಚಿ ಕಾಯವಿಕಾರ,ಮನೋ ವಿಕಾರ ಇಂದ್ರಿಯವಿಕಾರ, ಭಾವವಿಕಾರ ವಾಯುವಿಕಾರ ಉಂಟುಮಾಡಿ ಸೃಷ್ಟಿಗೆ ತಹುದು. ನಮ್ಮಲ್ಲಿ ಯಾವಾಗ ತಿಳಿವಳಿಕೆ ವಿವೇಕ ಕಡಿಮೆಯಾಗುತ್ತದೆ, ಆಗ ದೇಹ ಬಲಿತರೆ ಮೊದಲು ಕಾಮವಿಕಾರ ಉಂಟಾಗುತ್ತದೆ. ಕಾಮವಿಕಾರ ಹೆಚ್ಚಾಗುತ್ತಿ ದ್ದಂತೆ ಉಳಿದೆಲ್ಲ ವಿಕಾರಗಳು ಒಂದೊಂದಾಗಿ ಹೆಚ್ಚುತ್ತ ಹೋಗುತ್ತವೆ. ದೇಹದ ವಿಕಾರ,ಮನಸ್ಸಿನ ವಿಕಾರ,ಇಂದ್ರಿಯಗಳ ವಿಕಾರ ಭಾವವಿಕಾರ ಕಾಯವಿಕಾರ ಹೀಗೆ ಎಲ್ಲ ವಿಕಾರಗಳು ಹೆಚ್ಚುತ್ತವೆ.ಮೊದಲು ದೇಹ ಅಸಡ್ಡಾಳ ಬೆಳೆಯುತ್ತದೆ. ಇದರಿಂದ ದೇಹದಲ್ಲಿ ಬೊಜ್ಜು,ಹೊಟ್ಟೆ, ದಡೂತಿದೇಹ ವುಂಟಾಗುತ್ತದೆ. ಕೈಕಾಲು ಸರಿಯಾಗಿ ಕಾರ್ಯ ನಿರ್ವಹಿಸಲು ಬರದೆ ಶರೀರ ನಮಗೆ ಭಾರವಾಗಿ ಅನಾರೋಗ್ಯಗಳು ಒಂದೊಂದಾಗಿ ಬರುತ್ತವೆ. ಮನೋವಿಕಾರ ಎಂದರೆ ಮನಸ್ಸಿನಲ್ಲಿ ಒಳ್ಳೆಯವಿ ಚಾರಗಳು ಬರುವುದಿಲ್ಲ. ಕೆಟ್ಟ ವಿಚಾರ, ಕೆಟ್ಟಚಿಂತನೆಗಳು ಬರುತ್ತವೆ. ಇದರಿಂದ ನಮಗೆ ಹಾನಿ ಆಗುತ್ತದೆ. ನಮಗೆ ಕೆಟ್ಟಹೆಸರು ಬರುತ್ತದೆ. ಭಾವವಿಕಾರ ಎಂದರೆ ಒಳ್ಳೆಯ ಭಾವನೆಗಳ ಇರುವುದಿಲ್ಲ, ಉಂಟಾಗುವುದೂ ಇಲ್ಲ. ನಮ್ಮ ಜೀವನ ಶಾಂತಿ, ನೆಮ್ಮದಿ ಯಿಂದ ಇರಬೇಕಾದರೆ ಮೊದಲು ಒಳ್ಳೆಯ ಭಾವನೆಗಳಿರಬೇಕು. ಇಂದ್ರಿಯ ವಿಕಾರ . ಇವು ಕೂಡ ಮುಖ್ಯ ನಮ್ಮ ಇಂದ್ರಿಯಗಳೆ ನಮಗೆ ಶತ್ರು.

ನಮ್ಮ ಕಣ್ಣು ಕಿವಿ,ನಾಲಗೆ ಮೂಗು, ಚರ್ಮ ಈ ಪಂಚೇಂದ್ರಿಯಗಳೆ ನಮಗೆ ವಿಷಯಗಳ ರುಚಿ ಹೆಚ್ಚಿಸಿ,ಆಪ್ಯಾಯನ ಎನ್ನಿಸಿ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ಹೋಗಿ ಬಿಡುತ್ತವೆ. ಆದುದರಿಂದ ಇಂದ್ರಿಯವಿಕಾರಗಳಿಗೂ ನಾವು ಒಳಗಾಗಬಾರದು. ವಾಯುವಿಕಾರ ಒಳ್ಳೆಯ ಗಾಳಿ, ಪರಿಸರ ಇವು ಕೂಡ ಮುಖ್ಯ. ವಾಯು ವಿಕಾರ ಉಂಟಾದರೆ ಕೂಡಲೆ ರೋಗ. ಈ ಎಲ್ಲ ವಿಕಾರಗಳಿಗೆ ಮೂಲ ಅತಿ ಆಹಾರ, ಅತಿನಿದ್ರೆ. ಇವುಗಳನ್ನು ಮೊದಲು ನಿಯಂತ್ರಿಸ ಬೇಕು. ಈ ಎಲ್ಲ ವಿಕಾರಗಳು ಹೆಚ್ಚಿದರೆ ನಾವು ಪರಮಾತ್ಮನಿಂದ ಪುಣ್ಯದಿಂದ ದೂರಾಗುತ್ತೇವೆ. ಜನನ-ಮರಣಗಳು ಬೆನ್ನು ಬೀಳುತ್ತವೆ. ಆದುದರಿಂದ ಅತಿ ಪೋಷಣೆ ಮಾಡದೆ ಬದುಕುವುದಕ್ಕೆ ದೇಹ ಬೇಕು .ಈ ದೇಹವನ್ನು ಚೆನ್ನಾಗಿ ಇಟ್ಟುಕೊಳ್ಳೋಣ. ಜಪತಪ, ಧ್ಯಾನ, ಧಾರಣೆ, ಪೂಜೆಗೆ ಸೂಕ್ಷದಿಂ ತನುಮಾತ್ರವಿದ್ದರೆ ಸಾಲದೆ? ತನು ಪೋಷಿಸುವ ಆಶೆ ಯತಿತ್ವಕ್ಕೆ ವಿಘ್ನ. ಅನುಭಾವ ಜೀವನ ನಡೆಸುವವರು ಕುಸ್ತಿಪಟುಗಳೂ ಅಲ್ಲ. ಆಟದ ನಾಯಕರೂ ಅಲ್ಲ. ಜಿಮ್ ನ್ಯಾಷಿಯಮಂ ಮಾಡುವವರು ಅಲ್ಲ. ಬಾಡಿಬಿಲ್ಡರ್ ಮೊದಲೆ ಅಲ್ಲ. ಅದುದರಿಂದ ದೇಹಾರೋಗ್ಯ ಚೆನ್ನಾಗಿ ಇಟ್ಟುಕೊಳ್ಳಬೇಕು. ಇದನ್ನು ಅತಿಯಾಗಿ ಪೋಷಣೆ ಮಾಡುವುದು ಕೂಡದು. ಅತಿಪೋಷಣೆಯಿಂದ ನಮ್ಮ ವಿರಕ್ತಿ ಜೀವ ನಕ್ಕೆ ಹಾನಿ ಆಆಗುವುದು. ಆಹಾರ ಹಿತಮಿತವಾಗಿ ಇರಬೇಕು.

13)ಅವಾಗಳೂ ಎನ್ನ ಮನ ಉದರಕ್ಕೆ ಹರಿವುದು ಕಾಣಲಾರೆನಯ್ಯ ನಿಮ್ಮುವನು ಭೇದಿಸಲಾರೆನಯ್ಯ

ನಿಮ್ಮ ಮಾಯೆಯನು.

ಮಾಯದ ಸಂಸಾರದಲ್ಲಿ ಸಿಲುಕಿದೆನು.

ಎನ್ನ ದೇವ ಚೆನ್ನ ಮಲ್ಲಿ ಕಾರ್ಜುನಯ್ಯ ನಿಮ್ಮ ಹೊದ್ದು ವಂತೆ ಮಾಡಾ ನಿಮ್ಮ ಧರ್ಮಿ

ಪದಗಳ ಅರ್ಥ

ಉದರ-ಹೊಟ್ಟೆ, ಹಸಿವು.

ನಿಮ್ಮವನು-ನಿಮ್ಮನ್ನು,

ಮಾಯದ ಸಂಸಾರ-ಮೂರು ಶ್ರೀ ವಿಧಗಳು; ಹೊನ್ನು ಹೆಣ್ಣು, ಮಣ್ಣು, ಆಚಿರ ವಿಷಯಗಳು

ವಚನದ ಅರ್ಥ

ಇದು ಆತ್ಮಾವಲೋಕನದ ವಚನ. ಬಿಟ್ಟ ಬಾಣದಂತೆ ಗುರಿತಲುಪುವುದೊಂದೇ ಅಕ್ಕಮಹಾದೇವಿಯವರ ಜೀವನದ ಗುರಿ. ಅದಕ್ಕಾಗಿ ಮತ್ತೆ ಮತ್ತೆ ಪರಮಾತ್ಮನ ಹಂಬಲದಲ್ಲಿ ಪ್ರಾರ್ಥಿಸುತ್ತಾರೆ. ತಪಸ್ಸು ಮಾಡುತ್ತಾರೆ. ತಾವು ಎಷ್ಟೆಲ್ಲ ಸಾಧನೆ ತಪಸ್ಸು ಮಾಡಿದರೂ ಸಾಲದು ಎನ್ನುವ ಅತೃಪ್ತಿಯಿಂದ ತಮ್ಮ ಮನ ಅಂತರಂಗವನ್ನು ಆತ್ಮಾವ ಲೋಕನ ಮಾಡಿಕೊಳ್ಳುತ್ತಾರೆ. ಅವಾಗಳೂ ಎನ್ನ ಮನ ಉದರಕ್ಕೆ ಹರಿವುದು. ನನ್ನ 'ಮನಸ್ಸು ಯಾವಾಗಲೂ ಹೊಟ್ಟೆಯ ಚಿಂತೆಯನ್ನೇ ಮಾಡುತ್ತದೆ. ಖಂಡಿತ ಇಲ್ಲ. ಅಕ್ಕಮಹಾದೇವಿಯವರಿಗೆ ಪರಮಾತ್ಮನದೆ ಚಿಂತೆ ಇದೆ. ಆದರೂ ಮನಸ್ಸು, ದೇಹವನ್ನು ಜರಿದು ಕೊಳ್ಳುತ್ತಿದ್ದಾರೆ. ಇದನ್ನೆ ಸಂಸಾರ ಹೇಯಸ್ಥಲ ಎನ್ನುವುದು. ಯಾರಿಗೆ ಪರಮಾತ್ಮನ ಹಂಬಲ ಇರುತ್ತದೆ. ಅವರಿಗೆ ವಿಷಯ ಜಿಗುಪ್ಸೆ ತರುತ್ತದೆ. ಆಗ ಸಾಧಕರು ತಮ್ಮನ್ನು ಜರಿದು ಕೊಳ್ಳುತ್ತಾರೆ. ಮನಸ್ಸು ದೇಹದ ಕಡೆಗೆ ಇರುವುದರಿಂದಲೇ ನಿಮ್ಮ ದರ್ಶನಭಾಗ್ಯ ನಮಗಾಗಲಿಲ್ಲ. ಭೇದಿಸಲಾರೆನಯ್ಯ ನಿಮ್ಮ ಮಾಯೆಯನು. ನೀನು ಯಾವ ಮಾಯೆಯನ್ನು ಹರವಿರುವೆಯೇ ಅದನ್ನು ಭೇದಿಸಿ ನೋಡುವ ಶಕ್ತಿ ನನಗಿಲ್ಲ. ನಿನ್ನ ಮಾಯೆಯು ಸತ್ಯವನ್ನು ಸುಳ್ಳು ಮಾಡಿ, ಸುಳ್ಳನ್ನು ಸತ್ಯ ಮಾಡಿ ತೋರಿಸುತ್ತದೆ. ನನಗೆ ನಿಜ ದರ್ಶನ ಆಗಲೊಲ್ಲದು. ನೀನು ಹರಡಿದ ಜಗತ್ತಿನ ಮೂರು ದಿನದ ಸಂಸಾರದಲ್ಲಿ ನಾನು ಸಿಕ್ಕಿಕೊಂಡಿದ್ದೇನೆ. ಇದು ಆಕರ್ಷಣೆ ಮಾಡಿ ನನ್ನನ್ನು ಇಲ್ಲಿ ಎಳೆದಿಟ್ಟುಕೊಂಡಿದೆ. ನಿಮ್ಮ ಹೊದ್ದುವಂತೆ ಮಾಡಾ ಧರ್ಮಿ. ನೀನು ದಯಾಮಯ ಕರುಣಾಸಾಗರ ಎಂದೆಲ್ಲ ಹೇಳುತ್ತಾರೆ. ನನ್ನನ್ನು ನಿನ್ನ ಹತ್ತಿರ ಕರೆದುಕೊ. ಪರಮಾತ್ಮನ ಹಂಬಲ ಅಪಾರವಾಗಿದೆ. ದೇವರು ಸಾಕಾರ, ಸಗುಣ, ಭಕ್ತರನ್ನು ತಾನಿದ್ದಲ್ಲಿಗೆ ಕರೆದುಕೊಳ್ಳುತ್ತಾನೆ. ಎನ್ನುವ ಭಕ್ತಿಯಲ್ಲಿದ್ದಾರೆ ಅಕ್ಕ. ಈ .ನೆಲೆಯಲ್ಲಿ ಭಕ್ತನಿಗೆ ದೊಡ್ಡ ಆಘಾತ ಉಂಟಾಗುತ್ತದೆ. ದೇವರು ಏನು? ಎಂಬುದು ಈ ಆಘಾತದ ನಂತರ ಜ್ಞಾನಕ್ಕೆ ಬರುತ್ತದೆ. ಸಗುಣದಿಂದ ನಿರ್ಗುಣ ಭಕ್ತಿಗೆ ಮನಸ್ಸು ಅಡಿ ಇಡುತ್ತದೆ. ಪುರಾಣಗಳು, ಹಿರಿಯರು ಕಲಿಸಿದ ಸಗುಣ ಭಕ್ತಿಯ ಮಿತಿಗಳು ಕಣ್ಣೆದುರು ಬಂದು ಘಾತವೂ ಆಶ್ಚರವೂ ಆಗುತ್ತದೆ. ಈ ಆಘಾತದಿಂದ

14)ಆಳತನದ ಮಾತನೇರಿಸಿನುಡಿದಡೆ

ಆಗಳೆ ಕಟ್ಟಿದೆನು ಗಂಡುಗಚ್ಚೆಯ,

.ತಿಗುರನೇರಿಸಿ ತಿಲಕವನಿಟ್ಟು

ಕೈದುವ ಕೊಂಡು ಕಳನೇರಿದ ಬಳಿಕ,

ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ,

ಕಾಣಾ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಆಳುತನ-ವೀರತ್ವದ ಮಾತು. ಸೇವಾನಿಷ್ಠೆಯ ಮಾತು.

ಏರಿಸಿ-ಪ್ರಸ್ತಾಪಿಸಿ,

ಗಂಡು ಗಚ್ಚೆ-ವೀರ ಉಡುಗೆ,

ತಿಗುರು-ಧ್ವಜ,

ತಿಲಕ-ವಿಭೂತಿ ಧಾರಣೆ,

ಕೈದು-ಖಡ್ಗ,

ಕಳ- ಯೋಧ, ಯುದ್ಧಭೂಮಿ.

ಏರು- ಹೋರಾಟಕ್ಕೆ ಹೊರಡು,

ನಿರಿ-ವೀರ ಗಚ್ಚಿ

ಆಣೆ- ಭಾಷೆ, ಪ್ರತಿಜ್ಞೆ,

ವಚನದ ಅರ್ಥ

ಅಕ್ಕಮಹಾದೇವಿಯವರ ಕಾಲ. ವೀರ ಯುಗ. ಶರಣರು ಹೇಡಿಗಳಲ್ಲ. ವೀರರು. ಅನುಭಾವ ಹೇಡಿಗಳಿಗಲ್ಲ. ಪಲಾಯನವಾದಿಗಳಿಗೂ ಅಲ್ಲ. ವೀರರಿಗೆ ಜೀವನ ಬಾಳಲಾರದ ಹೇಡಿಗಳಿಗಲ್ಲ. ಈವಚನವು ವೀರತ್ವದ ಅನುಭಾವದ ಮಾತ ನ್ನಾಡುತ್ತದೆ.

ಅಕ್ಕಮಹಾದೇವಿಯವರ ವಚನಗ ಳಲ್ಲಿ ಮತ್ತೆ ಮತ್ತೆ ಇಂತಹ ವೀರ ಯುದ್ಧದ ಮಾತುಗಳು ಪ್ರಸ್ತಾಪವಾಗುತ್ತವೆ. ಅನುಭಾವ ಜೀವನಕ್ಕೆ ಬಂದದ್ದಾಗಿದೆ ಇಡೀ ವಚನ ವೀರನ ಪ್ರತಿಜ್ಞೆಯ ಯುದ್ಧದ ಚಿತ್ರ ರೂಪಕವಾಗಿದೆ.ಈವಚನವು ವೀರನ ಯುದ್ಧ ಹೋರಾಟದ ಪ್ರಸಂಗವನ್ನು ವಿವರಿಸು ತದೆ . ವೀರಭೀಷ್ಮನನ್ನು ಕೆಣಕಿದಾಗ ನಾನು ಹೇಗೆ ಯುದ್ಧಮಾಡುತ್ತೇನೆ ಎಂಬ ಪ್ರತಿ ಜ್ಞೆಮಾಡುತ್ತಾನೆ. ಹಾಗೆ ಅನುಭಾವಯುದ್ಧದ ಪ್ರತಿಜ್ಞೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಅಕ್ಕನವರೂ ವೀರರೂ ಹೌದು, ಅನುಭಾವಿಯೂ ಹೌದು. ಕವಿಯೂ ಹೌದು. ಭೀಷ್ಮನ ಪ್ರತಿಜ್ಞೆಯನ್ನು ಪಂಪಕವಿ ಚಿತ್ರಿಸಿದರೆ ಇಲ್ಲಿ ಅಕ್ಕನವರೆ ವಚನದಲ್ಲಿ ಚಿತ್ರಿಸಿ ದ್ದಾರೆ. ಈ

ವಚನವು ವೀರನ ಪ್ರತಿಜ್ಞೆರೂಪದಲ್ಲಿ ಆರಂಭವಾಗುತ್ತದೆ. ಅಕ್ಕನವರು ಈವೀರ ವಾತಾವರಣವನ್ನು ತಮ್ಮ ಊರಿನಲ್ಲಿ ಬೀದಿಯಲ್ಲಿ ಅಕ್ಕಪಕ್ಕದ ಮನೆಗ ಳಲ್ಲಿ ಕಂಡಿದ್ದರು. ಜನರು ವೀರರಾಗಿ ಬದುಕುವುದು ಅನಿವಾರವಾಗಿದ್ದಕಾಲವೂ ಹೌದು, ಯುದ್ಧಗೆಲ್ಲುವಲ್ಲಿ ವೀರನಿಗೆ ಆತ್ಮವಿಶ್ವಾಸ, ಕೆಚ್ಚು ಪರಾಕ್ರಮವಿದ್ದಂತೆ ಅನುಭಾವಿಗೂ ಆತ್ಮವಿಶ್ವಾಸ, ಸಾಧಿಸುವ ಧೈಯ, ಪ್ರಯತ್ನ ಗುರಿಮುಟ್ಟುವ ಧೀಶಕ್ತಿ ಮನೋಬಲ ಬೇಕು. ಆಳುತನದ ಮಾತನೇರಿಸಿ ನುಡಿದರೆ ಆಗಳೆ ಕಟ್ಟಿದೆನು ಗಂಡುಗ ಚ್ಚೆಯ. ನೀನು ವೀರನ? ಯೋಧನ? ಹೀಗೆ ಮಾತು ತೆಗೆದರೆ, ಗಂಡುಗಚ್ಚೆ ಹಾಕಿ. ಯುದ್ಧಕ್ಕೆ ಸಿದ್ಧಳಾಗಿನಿಲ್ಲುತ್ತೇನೆ.ತಿಗುರನೇರಿಸಿ ತಿಲಕವನಿಟ್ಟು ಕೈದುವ ಕೊಂಡು ಕಳ ನೇರಿದ ಬಳಿಕ ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ. ರಥಸಿದ್ಧಗೊಳಿಸಿ ಭಸ್ಮಧಾರ ಣೆಮಾಡಿ ಆಯುಧವಿಡಿದು ಯುದ್ಧರಂಗಕ್ಕೆ ತೆರಳಿದ ಬಳಿಕ, ವೀರಗಚ್ಚೆ ಸಡಿಲಿದರೆ. ಆಣೆ. ಯುದ್ಧದಲ್ಲಿ ಜಯಶಾಲಿಯಾಗಿಯೆ ಹಿಂದಿರುಗುವವಳು. ಹೇಡಿಯಾಗಿ ಓಡಿ ಬರುವವಳಲ್ಲ. ವೀರಾವೇಷದಿಂದ ಕಾದಾಡುತ್ತೇನೆ. ಇದು ಪ್ರತಿಜ್ಞೆ. ಹಾಗೆ ಅನುಭಾವ ಯುದ್ಧಕ್ಕೆ ದುಮುಕಿದ್ದೇನೆ. ಪರಮಾತ್ಮನನ್ನು ಸಾಧಿಸಿಯೆ ತೀರುತ್ತೇನೆ. ಅನು ಪಮವಾದ ಆತ್ಮವಿಶ್ವಾಸ ಇಲ್ಲಿದೆ. ಇಂದು ಆತ್ಮಹತ್ಯೆಮಾಡಿಕೊಳ್ಳುತ್ತಿರುವ ವಿದ್ಯಾ ರ್ಥಿಗಳು, ರೈತರು, ನಿರುದ್ಯೋಗಿಗಳು, ನಷ್ಟ ಅನುಭವಿಸಿದ ಉದ್ಯಮಿಗಳು ಅಕ್ಕಮ ಹಾದೇವಿಯವರು ವ್ಯಕ್ತಪಡಿಸಿರುವ ಈ ಆತ್ಮವಿಶ್ವಾಸವನ್ನು ಮನನಮಾಡಬೇಕು. ಹದಿನೆಂಟು ವರುಷದ ತರುಣಿ ರಾಜನನ್ನೆ ಎದುರಿಸಿ,ಏಕಾಂಗಿಯಾಗಿ ಜಿವನ ಸಮುದ್ರಕ್ಕೆ ದುಮುಕಿ, ಜೀವನವನ್ನು ಗೆದ್ದು ತೋರಿಸಿಕೊಟ್ಟಿದ್ದಾರೆ. ಬದುಕಿನಲ್ಲಿ ಏನು ಗುರಿ ಇರಿಸಿಕೊಂಡಿದ್ದರೊ ಅದನ್ನು ಅವರು ಅಪೂರ್ವವಾದ ರೀತಿಯಲ್ಲಿ ಸಾಧಿಸಿ ತೋರಿಸಿದ್ದಾರೆ. ಅಕ್ಕನವರ ಆತ್ಮವಿಶ್ವಾಸ ಎಲ್ಲರಿಗೂ ಮಾದರಿಯಾಗಿದೆ. ಸ್ತ್ರೀವಾದ, ಸ್ತ್ರೀವಿಮೋಚನೆ,ಸ್ತ್ರೀ ಸ್ವಾತಂತ್ರ್ಯ, ಎಂದು ಮಾತನಾಡುವ ಮಹಿಳೆಯರು, ಕುಂಗ್ ಫೂ.ಕರಾಟೆ,ಕುಸ್ತಿ ಜಮ್‌ನ್ಯಾಸಿಯಂ,ಯೋಗ ವ್ಯಾಪಾರ, ಉದ್ಯಮ ಇತರ ವೀರ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಅಕ್ಕಮಹಾದೇವಿಯವರ ಈ ವೀರತ್ವದ ಚಿಂತನೆಗಳನ್ನು ಮನನಮಾಡಬೇಕು.